# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :770 |
| ವಿಧಾನ ಪರಿಷತ್ತು ಸದಸ್ಯರ ಹೆಸರು | :ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | :16.12.2024. |
| ಉತ್ತರಿಸುವ ಸಚಿವರು | :ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಆಹಾರ ಪೊಟ್ಟಣಗಳ ಮೇಲೆ ಯಾವೆಲ್ಲಾ ವಿಷಯಗಳ ಕುರಿತು ಕಡ್ಡಾಯವಾಗಿ ನಮೂದು ಇರಬೇಕಾಗಿದೆ ಎಂದುದಾಗಿ ಆಹಾರ ವಸ್ತುಗಳ ಮಾರಾಟಗಾರರಿಗೆ ಆದೇಶಿಸಿದೆ;(ವಿವರ ನೀಡುವುದು) | ಕಾನೂನು ಮಾಪನಶಾಸ್ತ್ರ, ಇಲಾಖೆಯ ದಿ ಲೀಗಲ್ ಮೆಟ್ರಾಲಾಜಿ (ಪೊಟ್ಟಣ ಸಾಮಗ್ರಿ) ನಿಯಮಳು 2011ರ ನಿಯಮ 06 ರಂತೆ ಆಹಾರ ಪದಾರ್ಥದ ಪೊಟ್ಟಣಗಳ ಮೇಲೆ ಈ ಕೆಳಕಂಡ ಘೋಷಣೆಗಳು ಕಡ್ಡಾಯವಾಗಿ ನಮೂದಿಸಿರಬೇಕಾಗಿರುತ್ತದೆ.<br>1. ತಯಾರಕರ ಹೆಸರು ಮತ್ತು ವಿಳಾಸ.<br>2. ಪದಾರ್ಥದ ಹೆಸರು.<br>3. ನಿವ್ವಳ ತೂಕ.<br>4. ತಯಾರು/ಪ್ಯಾಕ್ ಮಾಡಲಾದ ತಿಂಗಳು ಹಾಗೂ ವರ್ಷ.<br>5. ಗರಿಷ್ಟ ಮಾರಾಟ ಬೆಲೆ ರೂ.(ಎಲ್ಲಾ ತೆರಿಗೆಗಳು ಒಳಗೊಂಡಂತೆ).<br>6. ಗ್ರಾಹಕರ ಸಂಪರ್ಕ ವಿವರ.<br>7. Unit sale price. |
| (ಆ) | ಸರ್ಕಾರದ ವತಿಯಿಂದ ಹಲಾಲ್ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಆಹಾರ ಪೊಟ್ಟಣಗಳ ಮೇಲೆ ಹಲಾಲ್ ಪ್ರಮಾಣ ಪತ್ರವನ್ನು ಅಚ್ಚು ಹಾಕಲು ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; ಈ ಕುರಿತು ಸರಕಾರದ ನಿಲುವೇನು; | ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯಿಂದ ಹಲಾಲ್ ಪ್ರಮಾಣ ಪತ್ರವನ್ನು ನೀಡುತ್ತಿಲ್ಲ. |
| (ಇ) | ಹಲಾಲ್ ಪ್ರಮಾಣ ಪತ್ರಗಳನ್ನು ಯಾವ ಸಂಸ್ಥೆಯವರು ನೀಡುತ್ತಿದ್ದಾರೆ ರಾಜ್ಯ ಸರಕಾರವು ಸದರಿ ಸಂಸ್ಥೆಯವರಿಗೆ ಹಲಾಲ್ ಪ್ರಮಾಣ ಪತ್ರ ನೀಡುವ ಅಧಿಕೃತ ಸಂಸ್ಥೆ ಎಂಬುದಾಗಿ ಅನುಮತಿ ನೀಡಿದೆಯೇ; ಇಲ್ಲವಾದಲ್ಲಿ, ಯಾರ ಅನುಮತಿಯನ್ನು ಪಡೆದು ಈ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ; ಇದರಿಂದ ಸರಕಾರಕ್ಕೆ ಎಷ್ಟು ಪ್ರಮಾಣದ ಶುಲ್ಕ ಸಂದಾಯವಾಗುತ್ತಿದೆ? | ಹಲಾಲ್ ಪ್ರಮಾಣ ಪತ್ರವನ್ನು ನೀಡುವುದು ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. |

ಆನಾಸ 161 ಕಾಮಾಸೇ 2024

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ, ಇಲಾಖಾ ಸಚಿವರು.